(Sri V. R. NAIDU.)

girl students of the northern extension is under their contemplation ;

(*b*) if so, when they will do it ?

A.—**Sri A. G. RAMACHANDRA RAO** (Minister for Law and Education).—

(*a*) No.

(*b*) Does not arise.

ಶ್ರೀ ವಿ. ಆರ್. ನಾಯ್ಡು.—ಮಲ್ಲೇಶ್ವರಂನಲ್ಲಿ ಒಂದು ಇಂಟರ್ ಮೀಡಿಯಟ್ ಕಾಲೇಜನ್ನು ಸ್ಥಾಪಿಸುವ ಆಲೋಚನೆಯಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಉತ್ತರದಲ್ಲೇ ಸಾಧ್ಯವಿಲ್ಲವೆಂದು ಹೇಳಿದ್ದೇವೆ; ಸ್ಪಷ್ಟವಾಗಿದೆ.

ಶ್ರೀ ವಿ. ಆರ್. ನಾಯ್ಡು.—ಮಲ್ಲೇಶ್ವರಂ ಬಡಾವಣೆಯಲ್ಲಿ ಸ್ಕೂಲಿಗೆ ಹೋಗುವ ವಿದ್ಯಾರ್ಥಿ ವಿದ್ಯಾರ್ಥಿನಿಯರು ಹೆಚ್ಚಿಗೆ ಇರುವುದರಿಂದ ಕೂಡಲೆ ಒಂದು ಇಂಟರ್ ಮೀಡಿಯಟ್ ಕಾಲೇಜನ್ನು ಸ್ಥಾಪಿಸುತ್ತಿರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಸಾರ್ವಜನಿಕರು ಸಹಾಯ ಮಾಡಲು ಮುಂದೆ ಬಂದರೆ ಯೂನಿವರ್ಸಿಟಿಯವರೂ ಆ ಬಗ್ಗೆ ಸಹಾಯ ಮಾಡುವುದಾಗಿ ಹೇಳಿದ್ದಾರೆ. ಸಾರ್ವಜನಿಕರು ಯಾರೂ ಇನ್ನೂ ಮುಂದೆ ಬಂದಿಲ್ಲ. ಪ್ರಶ್ನೆ ಮಾತ್ರ ಕೇಳುತ್ತಲೇ ಇದ್ದಾರೆ.

ಶ್ರೀ ವಿ. ಆರ್. ನಾಯ್ಡು.—ಹಾಗಾದರೆ ಸಾರ್ವಜನಿಕರು ತಮ್ಮ ಮುಂದೆ ನಿಯೋಗ ಬಂದ ಮೇಲೆ ಕೃಪೆಯಿಟ್ಟು ಮಾಡಿಕೊಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ನಿಯೋಗ ಬರುವುದಲ್ಲ ; ಸಾರ್ವಜನಿಕರು ಯಾವ ರೀತಿ ಸಹಾಯ ಮಾಡುವುದಕ್ಕೆ ಮುಂದೆ ಬರುತ್ತಾರೋ ಅದನ್ನು ನೋಡಿಕೊಂಡು ಸರ್ಕಾರದವರೂ ಸಹಾಯ ಮಾಡುವುದಕ್ಕೆ ನಿರ್ಧಾರ ಮಾಡುತ್ತಾರೆ.

Depressed Class Lecturers in University.

Q.—269. **Sri G. DUGGAPPA** (Holalkere—Scheduled Castes).—

Will the Government be pleased to State :—

(*a*) the total number of Lecturers in the University ?

(*b*) the number of Depressed Class Lecturers in the University ?

A.—**Sri A. G. RAMACHANDRA RAO** (Minister for Law and Education).—

(*a*) 557.

(*b*) Twelve.

ಶ್ರೀ ಜಿ. ದುಗ್ಗಪ್ಪ.—557 ಜನ ಲೆಕ್ಚರರುಗಳಿದ್ದಾರೆಂದು ಹೇಳಿದ್ದೀರಿ. ಇವರನ್ನೆಲ್ಲಾ ನೇರವಾಗಿ ನೇಮಕ ಮಾಡಿಕೊಂಡಿದ್ದೀರಾ ?

Sri A. G. RAMACHANDRA RAO.—Yes, through the Public Service Commission.

ಶ್ರೀ ಜಿ. ದುಗ್ಗಪ್ಪ.—ಈ ರೀತಿಯಾಗಿ ನೇರವಾಗಿ ನೇಮಕ ಮಾಡಿಕೊಳ್ಳುವಾಗ ಹಿಂದುಳಿದ ತರಗತಿಗಳವರಿಗೆ 16⅔ ಭಾಗವನ್ನು ಮೀಸಲಾಗಿಡಬೇಕೆಂಬ ನಿಯಮವನ್ನು ವಿಶ್ವವಿದ್ಯಾನಿಲಯದವರಿಗೆ ತಿಳಿಸಿದ್ದೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ತಿಳಿಸಿದ್ದೇವೆ.

ಶ್ರೀ ಜಿ. ದುಗ್ಗಪ್ಪ.—ಯಾವಾಗ ?

ಶ್ರೀ ಎ. ಜಿ. ರಾಮಚಂದ್ರರಾವ್.—ನಿಬಂಧನೆಗಳು ಆದ ತಕ್ಷಣ ತಿಳಿಸಿದ್ದೇವೆ.

ಶ್ರೀ ಜಿ. ದುಗ್ಗಪ್ಪ.—ಅಲ್ಲಿಂದೀಚೆಗೆ ಆ ರೂಲ್ ಪ್ರಕಾರ ಎಷ್ಟು ಜನ ಹಿಂದುಳಿದ ಪಂಗಡದವರನ್ನು ವಿಶ್ವವಿದ್ಯಾನಿಲಯದಲ್ಲಿ ನೇಮಿಸಿಕೊಳ್ಳಲಾಗಿದೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ನೋಟೀಸ್.

ಶ್ರೀ ಬಿ. ಟಿ. ಕೆಂಪರಾಜ್.—ಹೋದ ವರುಷ ಜುಲೈ ತಿಂಗಳಿನಲ್ಲಿ ಜಿಯಾಲಜಿ ಭಾಗಕ್ಕೆ 3 ಜನ ಲೆಕ್ಚರರುಗಳನ್ನು ತೆಗೆದುಕೊಂಡಿದ್ದೀರಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ನೋಟೀಸ್.

ಶ್ರೀ ಜಿ. ಪುಟ್ಟಸ್ವಾಮಿ.—ಇವೆಲ್ಲಾ ಸಪ್ಲಿಮೆಂಟರಿಯಾಗಿ ಉದ್ಭವಿಸುವ ಪ್ರಶ್ನೆಗಳಾಗಿರುವುದರಿಂದ ರಿಕಾರ್ಡ್‌ಗಳನ್ನು ನರಿಯಾಗಿ ನೋಡಿ ಜವಾಬು ಕೊಡಕೂಡದೇ ?

ಅಧ್ಯಕ್ಷರು.—ನೇರವಾದ ಪ್ರಶ್ನೆಯಾದರೆ ಉತ್ತರ ಹೇಳುತ್ತಾರೆ. ಇಲ್ಲದಿದ್ದರೆ ನೋಟೀಸ್ ಕೇಳಬೇಕಾಗುತ್ತದೆ.

ಶ್ರೀ ಬಿ. ರಾಚಯ್ಯ.—ಸರ್ಕಾರಿ ಹುಕುಮನ್ನು ಅವರು ಅಕ್ಷರಶಃ ಪಾಲಿಸಿದ್ದಾರೆಯೇ ಇಲ್ಲವೇ ಎಂದು ರಿಪೋರ್ಟ್ ತರಿಸಿಕೊಂಡು ನೋಡಿದ್ದೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಲೋಪವಾಗಿರುವುದೇನೂ ಕಂಡು ಬಂದಿಲ್ಲ.

ಶ್ರೀ ಕೆ. ಪ್ರಭಾಕರ್.—16⅔%ಗೆ ಕಡಮೆಯಿಲ್ಲದಂತೆ ನೇಮಕ ಮಾಡಿಕೊಳ್ಳಬೇಕೆಂದು ಸರ್ಕಾರಿ ಹುಕುಂ ಇದೆ. ಹಾಗಿರುವಾಗ, 49 ಜನರ ಪೈಕಿ ಒಬ್ಬರನ್ನು ಮಾತ್ರ ತೆಗೆದುಕೊಂಡಿದ್ದರೆ ಸರಿಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಸರಿಯಾದ ಅರ್ಹತೆಯಿರುವವರು ಬಂದಿದ್ದರೆ ಕೊಡುತ್ತಿದ್ದರು.

ಶ್ರೀ ಕೆ. ಪ್ರಭಾಕರ್.—ಸರಿಯಾದ ಅರ್ಹತೆಯಿರುವವರು ಬಂದರೂ ಯಾವುದೋ ನೆಪದ ಮೇಲೆ ತಳ್ಳಿಹಾಕುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಬಂದಿಲ್ಲ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—16⅔ ಭಾಗ ಕೊಡಬೇಕು ಎನ್ನುವುದರಲ್ಲಿ, ಇಲ್ಲಿಯ ವರೆಗೂ ಅಲ್ಲಿರ ತಕ್ಕ ಒಟ್ಟು ಸ್ಥಾನಗಳನ್ನು ಗಣನೆಗೆ ತೆಗೆದುಕೊಳ್ಳುತ್ತಾರೆಯೋ, ಅಥವಾ ಹುಕುಂ ಆದ ಮೇಲೆ ಉಂಟಾದ ಸ್ಥಾನಗಳನ್ನು ಗಣನೆಗೆ ತೆಗೆದುಕೊಳ್ಳುತ್ತಾರೆಯೋ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹುಕುಂ ಆದ ಮೇಲೆ fill ಮಾಡಬೇಕಾಗಿ ಬಂದಿರುವುದನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತದೆ.

Professors and Assistant Professors in the University.

Q.—322. **Sri K. PUTTASWAMY** (Sreerangapatna).—

Will the Government be pleased to state :—

(*a*) the number of permanent vacancies of Professors and Assistant Professors in the University that are not yet filled up (give details subject-war and also state the date from which the vacancy is existing);

(*b*) the reasons for not making permanent arrangement expeditiously;

(*c*) the steps they would take to see that vacancies are permanently filled up?

A.—**Sri A. G. RAMACHANDRA RAO** (Minister for Law and Education).—

(*a*)

Designation	Subject	No. of vacancies	Date of vacancy
Professors ...	English ...	1	1-4-1954
	Botany ...	1	1-4-1954
	Physics ...	1	15-5-1954
	Sanskrit ...	1	13-6-1954
	Economics ...	1	24-4-1954
	Political Science ...	1	30-8-1954
Assistant Professors ...	English ...	3	30-1-4954, 1-4-1954 & 11-9-1954
	Sanskrit (Indology)	1	30-9-1954
	Political Science ...	1	19-8-1952
	Philosophy ...	1	14-9-1952
	Chemistry ...	2	25-11-1954 4-8-1953
	Public Administration	1	28-7-1952

(*b*) The vacancies of Professors and Assistant Professors in the first instance, will be considered by the Standing Committee for appointments and thereafter the recommendation of the Standing Committee will be considered by the University Council. The decision of the Council will then be sent to Government for sanction. This process will naturally take some time.

(*c*) Does not arise in view of reply to clause (*b*).

Sri K. PUTTASWAMY.—There are three vacancies of Assistant Professors which have remained vacant for the past two years. May I know the reasons for this delay, Sir?

Sri A. G. RAMACHANDRA RAO.—I should like to know the subjects so that I might answer.

Sri K. PUTTASWAMY.—Political Science one, Philosophy another and the third is Public Administration.

Sri A. G. RAMACHANDRA RAO.—I shall get the information on those subjects and shall let you know why there has been that delay?

Sri K. PUTTASWAMY.—I have put a specific question requiring information on that point, Sir.

Mr. SPEAKER.—If the information is not available, how can he furnish it to you?

Sri K. PUTTASWAMY.—May I know when he will be in a position to furnish the information?

Sri A. G. RAMACHANDRA RAO.—We have sent this very question to the University, but they have not yet furnished replies to this question. As soon as we get the information, we will furnish it to you.

Sri Mulka GOVINDA REDDY.—Was there any vacancy of the post of a Professor in the Department of Geology?

Sri A. G. RAMACHANDRA RAO.—No, Sir, so far as I know.

Sri Mulka GOVINDA REDDY.—Is it a fact that the Director of Geology has been appointed as an *ex-officio* Professor of Geology in the Uuiversity?

Sri A. G. RAMACHANDRA RAO—Yes.

Sri Mulka GOVINDA REDDY.—Is it not a fact that this arrangement has ruined the chances of the internal management of the University ?

Sri A. G. RAMACHANDRA RAO.—No.

Sri Mulka GOVINDA REDDY.—Is it not a fact, Sir, that this man who is the Director of Geology is not in a position to devote as much time as is required to be the Professor or the Head of the Department in the University ?

Sri A. G. RAMACHANDRA RAO.—No.

Mr. SPEAKER.—You are going too far from the main question.

Sri Mulka GOVINDA REDDY.—Is the question of approving or rejecting the proposal sent by the University regarding Professors or Assistant Professors of any one of these Departments pending before the Government ?

Sri A. G. RAMACHANDRA RAO.—Some cases of Professors have come up before the Government. The cases of Assistant Professors are expected to come up before the Government.

Sri Mulka GOVINDA REDDY.—To what departments these professors belong whose appointments are pending before the Government ?

Sri A. G. RAMACHANDRA RAO.—I shall give that information later.

Sri Mulka GOVINDA REDDY.—Are the Government aware that a similar question was put on the floor of this House regarding the filling up of the vacancies of Assistant Professors to Public Administration in the University ?

Sri A. G. RAMACHANDRA RAO.—There was some question, Sir ?

Sri Mulka GOVINDA REDDY.—What action has the Government taken ?

Sri A. G. RAMACHANDRA RAO.—I want notice for that, Sir.

Sri Mulka GOVINDA REDDY.—Was there not sufficient notice—about six months, to answer that question, Sir ?

Sri A. G. RAMACHANDRA RAO.—We are pursuing in the matter, Sir. If you want the information, I will get the full information and furnish to you.

Sri G. DUGGAPPA.—Whether the University Council has recommended any name for filling up the post of Professor of Botany ?

Sri A. G. RAMACHANDRA RAO.—I believe they have, Sir ?

Sri G. DUGGAPPA.—Will the Hon'ble Minister tell the name of the candidates recommended, Sir ?

Sri A. G. RAMACHANDRA RAO.—Not at this stage.

Sri R. ANANTARAMAN.—Who are the members of the Standing Committee ?

Sri A. G. RAMACHANDRA RAO.—There will be members representing the Syndicate as well as outside.

Sri R. ANANTARAMAN.—Are they elected, Sir ?

Sri A. G. RAMACHANDRA RAO.—Yes, they are elected by the Syndicate.

Sri R. ANANTARAMAN.—Are they not nominated by the Vice-Chancellor ?

Sri A. G. RAMACHANDRA RAO.—Sometimes this Syndicate delegates this authority to the Vice-Chancellor also. It is the Syndicate that selects the persons.

Sri. R. ANANTARAMAN.—In this particular case, are they nominated or elected Sir ?

Mr. SPEAKER.—The information is not available. You can supply that information later on.

Sri B. NARAYANASWAMY.—Has not the University Council made recommendations regarding all Professors ?

Sri A. G. RAMACHANDRA RAO.—Some recommendations have come up.

Sri B. NARAYANASWAMY.—Has not the University Council made selection of all Professors ?

Sri A. G. RAMACHANDRA RAO.—I do not know if they have made selection for all vacancies that are there, but some recommendations have been received by the Government.

Sri B. NARAYANASWAMY.—Who are those Professors who have been recommended by the University Council to Government ?

Sri A. G. RAMACHANDRA RAO.—At this stage, we cannot give the names.

Sri B. NARAYANASWAMY.—Am I correct when I say that the appointment of Sanskrit Professor is before Government ?

Sri A. G. RAMACHANDRA RAO.—Possibly.

Sri B. NARAYANASWAMY.—Is Government definite or not definite ?

Mr. SPEAKER.—He may not remember all the cases.

Sri B. NARAYANASWAMY.—May I make a request to the Speaker that this question may kindly be taken up at some other time so that the Hon'ble Minister may collect the information and place before the House ?

Mr. SPEAKER.—All right. This question will be taken up some other day. Next question.

Mysore Shops and Establishments Act (Proposals to Amend).

Q.—103. Sri D. VENKATESH (Gandhinagar Constituency).—

Will the Government be pleased to state :—

whether they have received any proposals to amend the Mysore Shops and Establishments Act, so as to include the following :—

(i) to provide the power of reinstatement to the Appellate Authority ;

(ii) to provide the power of granting compensation without any ceiling limit ;

(iii) to provide the power to the Government to collect the amount awarded by the Appellate Authority from the defaulting employer ?

A.—Sri A. G. RAMACHANDRA RAO (Minister for Law and Education).—

(i) Yes.
(ii) No.
(iii) Yes.

Sri D. VENKATESH.—Will the Government at least introduce the amendment recommended by the Labour Department as early as possible ?

Sri A. G. RAMACHANDRA RAO.—As I submitted even last time, the matter is under the consideration of the Central Government and they have said that they would try to frame a uniform law for the whole country. We have been waiting for that.

Sri D. VENKATESH.—Is there any bar if this Government takes such of the amendments as are practically useful when they feel the difficulty ?

Sri A. G. RAMACHANDRA RAO.—There is no bar, but it is better to have a uniform law throughout the country.

ಶ್ರೀ ಎಸ್. ಗೋಪಾಲಗೌಡ.—ಈ ಷಾಪ್ಸ್ ಅಂಡ್ ಎಷ್ಟಾಬ್ಲಿಷ್‌ಮೆಂಟ್ ಆಕ್ಟನ್ನು ತಿದ್ದುಪಡಿ ಮಾಡಬೇಕೆಂದು ಸರ್ಕಾರದವರನ್ನು ಕೋರಿ ಯಾರಾದರೂ ಮನವಿಗಳನ್ನು ಕಳುಹಿಸಿದ್ದಾರೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಕೆಲವು ಖಾಸಗೀ ಜನರು ಕೊಟ್ಟಿದ್ದಾರೆ.

ಶ್ರೀ ಎಸ್. ಗೋಪಾಲಗೌಡ.—ಬೆಂಗಳೂರಿನಲ್ಲಿರುವ ಹೊಟೇಲ್ ವರ್ಕರ್ಸ್ ಅಸೋಸಿಯೇಷನ್ನಿನವರೂ ಮತ್ತು ಬೆಂಗಳೂರು ಷಾಪ್ ಅಸಿಸ್ಟೆಂಟ್ಸ್ ಯೂನಿಯನ್ನಿನವರೂ ಈ ಷಾಪ್ ಅಂಡ್ ಎಷ್ಟಾಬ್ಲಿಷ್‌ಮೆಂಟ್ ಆಕ್ಟಿನ 41 (3 ನೆಯ ಸೆಕ್ಷನ್ನನ್ನು ತಿದ್ದುಪಡಿ ಮಾಡಬೇಕೆಂದು ಮನವಿಗಳನ್ನೇನಾದರೂ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದಾರೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೌದು. ಕಳುಹಿಸಿಕೊಟ್ಟಿದ್ದಾರೆ.

ಶ್ರೀ ಎಸ್. ಗೋಪಾಲಗೌಡ.—ಈಗ ಈ ಆಕ್ಟ್ ನಮ್ಮ ದೇಶದಲ್ಲಿ ಯಾವ ಯಾವ ಪ್ರದೇಶದಲ್ಲಿ ಜಾರಿಯಲ್ಲಿದೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಈ ಕಾನೂನು ಮೈಸೂರು ಸಂಸ್ಥಾನದ ಇಪ್ಪತ್ತು ಕಡೆಗಳಲ್ಲಿ ಜಾರಿಯಲ್ಲಿದೆ.

ಶ್ರೀ ಎಸ್. ಗೋಪಾಲಗೌಡ.—ನಮ್ಮ ಮೈಸೂರು ಸಂಸ್ಥಾನದಲ್ಲಿ ಇದು ಬೆಂಗಳೂರು, ಮೈಸೂರು, ಕೆ. ಜಿ. ಎಫ್., ದಾವಣಗೆರೆ, ಬಳ್ಳಾರಿ ಇತ್ಯಾದಿ ಕಡೆಗಳಲ್ಲಿ ಜಾರಿಯಲ್ಲಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅಷ್ಟೇ ಅಲ್ಲ. ಇನ್ನೂ ಕೆಲವು ಕಡೆ ಇದೆ.

ಶ್ರೀ ಎಸ್. ಗೋಪಾಲಗೌಡ.—ಈ ಆಕ್ಟನ್ನು ಎಲ್ಲೆಲ್ಲಿ ಮುನಿಸಿಪಾಲಿಟಿಗಳಿರುತ್ತವೆಯೋ ಆ ಸ್ಥಳಿಗಳಲ್ಲೆಲ್ಲಾ ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಆ ಸ್ಥಳೀಯ ಸಂಸ್ಥೆಗಳವರು ಕೇಳಿಕೊಂಡರೆ ಆಗಬಹುದು.

ಶ್ರೀ ಬಿ. ಮಾಧವಾಚಾರ್.—ಈ ಆಕ್ಟನ್ನು ಪ್ರತಿಯೊಂದು ತಾಲ್ಲೂಕು ಕನಬಗಳಲ್ಲಿಯೂ ಜಾರಿಗೆ ತರುವುದಕ್ಕೆ ಪರಿಶೀಲನೆ ಮಾಡಿದ್ದೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಸರ್ಕಾರದವರಿಗೆ ಈ ಸಂಬಂಧವಾಗಿ ಮುನಿಸಿಪಾಲಿಟಿಗಳವರ ಅಭಿಪ್ರಾಯ ಪಡೆದು ಮಾಡಬೇಕೆಂಬುದಾಗಿದೆ.

ಶ್ರೀ ಆರ್. ಅನಂತರಾಮನ್.—ಈಗ ಆ ಸಂಸ್ಥೆಗಳವರು ತಮ್ಮ ಅಭಿಪ್ರಾಯವನ್ನೇನಾದರೂ ಕೇಳಿದ್ದಾರೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಕೇಳಿದ್ದಾರೆ.

ಶ್ರೀ ಆರ್. ಅನಂತರಾಮನ್.—ಆ ಬಗ್ಗೆ ತಾವು ತಮ್ಮ ಶಿಫಾರ್ಸುಗಳನ್ನು ಅವರಿಗೆ ಕಳುಹಿಸಿದ್ದೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಕಳುಹಿಸಿದ್ದೇವೆ.

ಶ್ರೀ ಆರ್. ಅನಂತರಾಮನ್.—ಅವರು ಇದರಲ್ಲಿರ ತಕ್ಕಂಥ ಕುಂದು ಕೊರತೆಗಳೇನೆಂಬುದನ್ನು ಕೇಳಿದ್ದಾರೆಯೇ ?